ಹುಂಕ್ಕೇರಿ ತಾಲ್ಲೂಕಿಂ ವಿದ್ಯುತ್ ಸಹಕಾರಿ ಸಂಘದ ವ್ಯಾಪ್ತಿಯಲ್ಲಿ ಬರುವ ಜನತಾ ಹೌಸಿಂಗ್ ಕಾಲೋನಿ ಹತ್ತರಗಿ ಬಡಾವಣೆ ಬಗ್ಗೆ

೬೨೬. ಮಲ್ಲಾರಿಗೌಡ ಎಸ್. ಪಾಟೀಲ್, (ಸಂಕೇಶ್ವರ.)—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹತ್ತರಗಿ ಜನತಾ ಹೌಸಿಂಗ್ ಕಾಲೋನಿಯಲ್ಲಿ ಮನೆಗಳ ಸಂಖ್ಯೆ ಎಷ್ಟು

ಆ) ಜನತಾ ಹೌಸಿಂಗ್ ಕಾಲೋನಿಯಲ್ಲಿ ವಾಸ ಮಾಡುತ್ತಿರುವ ಜನಸಂಖ್ಯೆ ಎಷ್ಟು

ಇ) ಜನತಾ ಹೌಸಿಂಗ್ ಕಾಲೋನಿ ನಿರ್ಮಾಣವಾಗಿ ಎಷ್ಟು ವರ್ಷವಾಯಿತು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯಿತ್ ರಾಜ್, ವಸತಿ ಮತ್ತು ವಕ್ಫ್ ಸಚಿವರು).

ಅ) ೧೫೬ ಮನೆಗಳು.

ಆ) ೭೨೫ ಜನ

ಇ) ೧೨ ವರ್ಷಗಳು.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತ್ ವ್ಯವಸ್ಥೆಯಲ್ಲಿ ಕ್ಷೇತ್ರಾಭಿವೃದ್ಧಿ ಬಗ್ಗೆ

೬೬೬. ಶ್ರೀ ಬಿ. ಆರ್ ನೀಲಕಂಠಪ್ಪ (ತರೀಕೆರೆ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತ್ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಲಾಗಿರುವುದೇ ಹಾಗಿದ್ದಲ್ಲಿ ಯಾವಾಗ?

ಆ) ಇದರಿಂದಾಗಿ ಈಗ ಇರುವ ಕ್ಷೇತ್ರಾಭಿವೃದ್ಧಿ ಕಾರ್ಯ ನಿರ್ವಹಣೆಯನ್ನು ರದ್ದುಗೊಳಿಸಲಾಗಿರುವುದೇ. ಹಾಗಿದ್ದಲ್ಲಿ ಅಲ್ಲಿ ಕೆಲಸ ಮಾಡುತ್ತಿರುವ ನೌಕರರ ಭವಿಷ್ಯವೇನು?

ಶ್ರೀ ಅಬ್ದುಲ್ ನಜೀರ್‌ಸಾಬ್. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)—

ಅ) ದಿನಾಂಕ ೧೪-೮-೮೫ ರಿಂದಲೇ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿಗಳು ಮಂಡಲ್ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯತಿಗಳು ಕಾಯಿದೆ ೧೯೮೩ ಕರ್ನಾಟಕ ಕಾಯಿದೆ ೨೦೦ ೧೯೮೩) ಜಾರಿಗೆ ಬಂದಿದೆ. ಆದರ ಅವಧಿಯಲ್ಲಿ ಜಿಲ್ಲಾ ಪರಿಷತ್‌ಗಳ ಮತ್ತು ಮಂಡಲ ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸುವ ಸಲುವಾಗಿ ಕ್ಷೇತ್ರ ವಿಂಗಡಣೆ ನಿಯಮಗಳು ಮತ್ತು ಇತರೆ ಕಾರ್ಯಗಳನ್ನು ಮಾಡಲಾಗುತ್ತಿದೆ.

ಆ) ಕ್ಷೇತ್ರಾಭಿವೃದ್ಧಿ ಕಾರ್ಯ ನಿರ್ವಹಣೆಯನ್ನು ರದ್ದುಗೊಳಿಸುವುದಿಲ್ಲವಾದ್ದರಿಂದ ಅಲ್ಲಿ ಕೆಲಸ ಮಾಡುತ್ತಿರುವ ನೌಕರರ ಭವಿಷ್ಯತ್ತಿನ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ಜಿಲ್ಲೆಯಲ್ಲಿನ ಜೀತ ಪದ್ಧತಿ ನಿರ್ಮೂಲನೆ ಬಗ್ಗೆ

೫೮೫. ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಎಷ್ಟು ಮಂದಿಜೀತ ವಿಮುಕ್ತರಿದ್ದಾರೆ?

ಆ) ಇದುವರೆಗೆ ಎಷ್ಟು ಜೀತ ವಿಮುಕ್ತರಿಗೆ ಪರಿಹಾರ ದೊರಕಿದೆ?

ಇ) ಇದರಲ್ಲಿ ನಂಜನಗೂಡು ತಾಲ್ಲೂಕಿನಲ್ಲಿ ಎಷ್ಟು ಜನ ಇದ್ದಾರೆ?

ಈ) ಆ ಪೈಕಿ ಎಷ್ಟು ಜನಕ್ಕೆ ಪರಿಹಾರ ದೊರಕಿದೆ?